# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 27.01.2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ–27–01–2022 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ದಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರಮ .ಸಂ | ಹೆಸರು ಪ್ರಧಾನ ಅಭಿಯಂತರರು | ಮೊಬೈಲ್ ಸಂಖ್ಯೆ |
|---|---|---|
| ೦೧ | ಶ್ರೀ.ಎಸ್.ಪ್ರಭಾಕರ್. ಮುಖ್ಯ ಅಭಿಯಂತರರು (~~ಪೂರ್ವ~~)ಬಿ.ಬಿ.ಎಂ.ಪಿ. | 9480685379 |
| ೦೨ | ಶ್ರೀ.ಸತೀಶ್.ಡಿ ಸ.ಇಂ–152 ವಾರ್ಡ್ | 9480688152 |
| ೦೩ | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| ೦೪ | ಶ್ರೀ. ಎನ್.ಓಬಳೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| ೦೫ | ಶ್ರೀ.ಬಿಜಗದೀಶ್ ಎ.ಎಸ್.ಐ ಎಸ್.ಜಿ.ಪಾಳ್ಯ ಪೊಲೀಸ್ ಠಾಣೆ | 8867733318 |
| ೦೬ | ಶ್ರೀ.ಹೋಲಿಯಪ್ಪ ಮಾರ್ಷ್‌ಲ್ | 8904349926 |
| ೦೭ | ಶ್ರೀಮತಿ.ಆಶಾ ಸ.ಅ ಬೆಸ್ಕಾಂ | 9900724229 |
| ೦೮ | ಶ್ರೀ.ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬಿ.ಡ.ಬ್ಲೂ.ಎಸ್.ಎಸ್.ಬಿ | 9845768405 |
| ೦೯ | ಶ್ರೀ ಸೈಯದ್ ನಸರುದ್ದೀನ್ ಸದಸ್ಯರು | 9741518897 |
| ೧೦ | ಶ್ರೀ.ಬಿ.ವಿಶ್ವಕುಮಾರ್ ಸದಸ್ಯರು | 9845371963 |
| ೧೧ | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾನಿ | 9901002067 |
| ೧೨ | ಶ್ರೀ ರಮೇಶ್ ಸದಸ್ಯರು | 9731108622 |
| ೧೩ | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾನಿ | 9980225272 |
| ೧೪ | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| ೧೫ | ಶ್ರೀ.ಬಿ.ಟಿ.ಕೃಷ್ಣಮೂರ್ತಿ ಸದಸ್ಯರು | 9886339044 |
| ೧೬ | ಶ್ರೀಮತಿ.ಸ್ವಾಮಿಗೌಡ ಪರಿವೀಕ್ಷಕರು ತೋಟಗಾರಿಕೆ ಇಲಾಖೆ ದಕ್ಷಿಣ | 9945378526 |
| ೧೭ | ಶ್ರೀ ಮಂಜೂನಾಥ ಪಿ. ಮೇಲ್ವಿಚಾರಕರು ಘ.ತ್ಯಾನಿ | 9740903427 |
| ೨೮ | ಶ್ರೀಮತಿ ಕವಿತ ಆರ್ | 9620394514 |

1) ಮಾನ್ಯ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸುತ್ತಾ, ಮೊದಲನೇಯದಾಗಿ ತಾವರೆಕೆರೆ ಮುಖ್ಯರಸ್ತೆಯ ಬೃಹತ್ ಮಳೆ ನಿರುಗಾಲುವೆ ಹತ್ತಿರ ಬಂಟಿಗ್ಸ್ ಅಳವಡಿಸಿದ್ದು ಕಂಡುಬಂದಿದ್ದು, ಈ ಸಂಬಂಧ ವಾರ್ಡ್ ಅಭಿಯಂತರರನ್ನು ಉದ್ದೇಶಿಸಿ ಮಾತನಾಡಿ ಸದರಿ ಬಂಟಿಂಗ್ಸ್ ಮತ್ತು ಇನ್ನಿತರೆ ಪ್ರದೇಶದಲ್ಲಿನ ಬ್ಯಾನರ್‌ಗಳನ್ನು ತೆರವುಗೊಳಿಸಲು ಸೂಚಿಸಿದರು.

2) ಸಭೆಗೆ ಹಾಜರಿದ್ದ ಶ್ರೀ ಸೈಯದ್ ನಜರೂದ್ದಿನ್ ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿನ 6ನೇ ಡಿ ಅಡ್ಡರಸ್ತೆ ಬಾಲಾಜಿನಗರ ಪ್ರದೇಶದಲ್ಲಿ ದ್ವಿ ಚಕ್ರವಾಹನಗಳು ಕಳ್ಳತನವಾಗುತ್ತಿರುವುದು ಹಲವಾರು ಪ್ರಕರಣಗಳು ಕಂಡುಬಂದಿದ್ದು, ಈ ಬಗ್ಗೆ ಅಗತ್ಯ ಪೊಲೀಸ್‌ಕ್ರಮಗಳನ್ನು ಜರುಗಿಸಬೇಕೆಂದು ಸಭೆಗೆ ತಿಳಿಸಿದರು. ಈ ಸಂಬಂಧ ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್ ಅಭಿಯಂತರರನ್ನು ತಿಳಿಸುತ್ತಾ, ಸಂಬಂಧಪಟ್ಟ ಸ್ಥಳೀಯ ಪೊಲೀಸ್ ಅಧಿಕಾರಿಯವರಿಂದ ಕ್ರಮಕೈಗೊಳ್ಳಲು ತಿಳಿಸಿದರು.

3) ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೋಗ ಮೂರನೇ ಅಲೆಯ ಹೊಸ ರುಪಾಂತರಿ ತಳಿ ಓಮಿಕ್ರಾನ್ ರೋಗ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ದರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸಬೇಕು ಹಾಗೂ ಮಾಸ್ಕ ದರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದು ವಾರ್ಡ್ ಸದಸ್ಯರು ರವರಿಗೆ ಸೂಚಿಸಿದರು.

4) ಶ್ರೀ ಸೈಯದ್ ನಸರೂದ್ದಿನ್ ಮಾತನಾಡಿ, ಬಾಲಾಜಿನಗರ 6ನೇ ಅಡ್ಡರಸ್ತೆಯಲ್ಲಿರುವ ಬೃಹತ್ ಮಳೆ ನೀರುಗಾಲುವೆಯಲ್ಲಿ ಸಾರ್ವಜನಿಕರು ಕಸ ಮತ್ತು ಘನತ್ಯಾಜ್ಯವನ್ನು ಬಿಸಾಡುತ್ತಿರುವುದರಿಂದ ಮಳೆ ನೀರು ಸರಾಗವಾಗಿ ಹರಿಯದೇ ಇರುವುದರಿಂದ ಅನೈರ್ಮಲ್ಯ ಹೆಚ್ಚಾಗಿ ದುರ್ನಾತ ಮತ್ತು ರೋಗಗಳು ಹಬ್ಬುವ ಸಂಭವ ಹೆಚ್ಚಾಗಿರುತ್ತದೆ. ಆದುದರಿಂದ ಸದರಿ ನೀರುಗಾಲುವೆಗೆ ಕಸ ಬಿಸಾಡದಂತೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಲು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಮಾತನಾಡಿ, ಬೃಹತ್ ಮಳೆ ನೀರುಗಾಲುವೆ ಇಲಾಖೆವತಿಯಿಂದ ಕ್ರಮವಹಿಸಲು ಸೂಚಿಸಿದರು.

5) ಶ್ರೀ ಬಿ.ಟಿ.ಕೃಷ್ಣಮೂರ್ತಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಹಲವಾರು ಮುಖ್ಯರಸ್ತೆ ಮತ್ತು ಪಾದಚಾರಿ ಮಾರ್ಗದಲ್ಲಿ ಕೇಬಲ್‌ಗಳು ನೆತಾಡುತ್ತಿರುವುದು ಕಂಡುಬಂದಿದೆ ಇದರಿಂದ ವಾಹನ ಸಂಚಾರರಿಗೆ ಸುಗಮವಾಗಿ ಒಡಾಡಲು ತೊಂದೆಯಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ವಾರ್ಡ್ ಅಭಿಯಂತರರಿಗೆ ಈ ಬಗ್ಗೆ ಅಗತ್ಯಕ್ರಮವಹಿಸಲು ಸೂಚಿಸಿದರು.

6) ಶ್ರೀ.ಲೋಕೆಶ್.ಎನ್ ರವರು ಮಾತನಾಡಿ ಚಿಕ್ಕಾಡುಗೋಡಿ ಪ್ರದೇಶದಲ್ಲಿ ಸೈಕಲ್ ಕಳ್ಳತನವಾಗಿರುವ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿರುತ್ತದೆ. ಈ ಬಗ್ಗೆ ಮಡಿವಾಳ ಪೊಲೀಸ್ ಠಾಣೆಯವರಿಗೆ ಹಲವಾರು ಬಾರಿ ದೂರು ನೀಡಿದ್ದರೂ ಸಹ ಯಾವುದೇ ಕ್ರಮಗಳು ಜರುಗಿಸದಿರುವುದು ಕಂಡುಬಂದಿರುತ್ತದೆ ಹಾಗೂ ರಾತ್ರಿ 11:00 ಗಂಟೆ ಮತ್ತು 03.00 ಗಂಟೆ ಸಮಯದಲ್ಲಿ ಈ ಪ್ರದೇಶಕ್ಕೆ ಗಸ್ತುಮಾಡುವುದು ಸೂಕ್ತವಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಮಾತನಾಡಿ ಸಭೆಗೆ ಹಾಜರಿದ್ದ ಪೊಲೀಸ್ ಅಧಿಕಾರಿರವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

7) ಶ್ರೀ.ಲೋಕೆಶ್ ಎನ್ ರವರು ಮಾತನಾಡಿ ಚಿಕ್ಕಾಡುಗೋಡಿ 3ನೇ ಅಡ್ಡರಸ್ತೆಯಲ್ಲಿ ಬೀದಿದೀಪಗಳ ಫಿಟಂಗ್ಸ್ ಇಲ್ಲದೇ ಇರುವುದರಿಂದ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸಭೆಗೆ ತಿಳಿಸಿದರು. ಈ ಸಂಬಂಧ ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧ ಪಟ್ಟ ಇಲಾಖೆಯಿಂದ ಕಾರ್ಯನಿರ್ವಹಿಸಲು ತಿಳಿಸಿದರು.

8) ಮಾನ್ಯ ಸಭಾಧ್ಯಕ್ಷರು ಮಾತನಾಡಿ, ತಾವರೆಕೆ ಮುಖ್ಯರಸ್ತೆ ಸೆಂಟ್‌ಜಾನ್ಸ್ ಅಪಾರ್ಟ್‌ಮೆಂಟ್ ಹತ್ತಿರ ವಿದ್ಯುತ್ ಟ್ರಾನ್ಸ್‌ಫಾರ್ಮ್ ಸುತ್ತಲು ಫೆನ್ಸಿಂಗ್ ಇಲ್ಲದಿರುವುದರಿಂದ ಅಲ್ಲಿನ ಪಾದಚಾರಿ ಮತ್ತು ವಾಹನ ಸಂಚಾರಿಗಳಿಗೆ ಅಪಾಯವಾಗುವ ಸಂಭವವಿರುತ್ತದೆ. ಆದುದರಿಂದ ಮುಂಜಾಗ್ರತ ಸುರಕ್ಷತೆಗಾಗಿ ಕೂಡಲೇ ಸದರಿ ಟ್ರಾನ್ಸ್‌ಫಾರ್ಮ್‌ನ ಸುತ್ತಲು ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸಲು ಸಭೆಗೆ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿ ತಿಳಿಸಿದರು.

9) ಮಾನ್ಯ ಸಭಾಧ್ಯಕ್ಷರು ಮಾತನಾಡಿ, ಕೊವೀಡ್–19 ರ ರೂಪಾಂತರಿ ತಳಿಯ 3ನೇ ಅಲೆ ಹಬ್ಬತ್ತಿರುವುದರಿಂದ ರೋಗ ನಿರ್ವಹಣೆ ಬಗ್ಗೆ, ಕೊವೀಡ್ ಲಸಿಕೆ ನೀಡಿರುವ ಪ್ರಗತಿಯ ಬಗ್ಗೆ ಮತ್ತು ಇತರೆ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲು ಮೇಡಿಕಲ್ ಆಫಿಸರ್ಸ್ ಡಾ॥ ಕಮ್ರನ್ ರವರು ಹಲವು ಸಭೆಗಳಿಗೆ ಅನುಪಸ್ಥಿತಿ ಇರುವುದರಿಂದ ಹಲವಾರು ಬಾರಿ ವಾಟ್ಸ್‌ಆಪ್ ಮುಖೇನ ತಿಳಿಸಿದ್ದರೂ ಸಹ ಸಭೆಗೆ ಗೈರಾಗಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಾರ್ಡ್ ಅಭಿಯಂತರರರಿಗೆ ತಿಳಿಸುತ್ತಾ, ಸಂಬಂಧ ಪಟ್ಟ ವೈದ್ಯಾಧಿಕಾರಿಗಳಿಗೆ ಪತ್ರ ರವಾನಿಸಿ ಮುಂಬರುವ ಸಭೆಗೆ ತಪ್ಪದೇ ವಿರಗಳೊಂದಿಗೆ ಹಾಜರಾಗಲು ತಿಳಿಸಿದರು.

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ, ಹಾಲಿ ದೇಶವ್ಯಾಪ್ತಿ ಕೋರೋನ ರೋಗಾಣುವಿನ ಹೊಸದಾಗಿ ರೂಪಾಂತರ ತಳಿ ಓಮಿಕ್ರಾನ್ ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿದುರವುದರಿಂದ ರೋಗ ಹರಡುವುದನ್ನು ತಡೆಗಟ್ಟಲು ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರಿಗೆ ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

ಪ್ರತಿಯನ್ನು:
1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.